# ಕುವೆಂಪು ವಿಶ್ವವಿದ್ಯಾಲಯ

**ಪಠ್ಯೇತರ ಚಟುವಟಿಕೆ ವಿಭಾಗ**

**ಜ್ಞಾನಸಹ್ಯಾದ್ರಿ ಶಂಕರಘಟ್ಟ – 577451**

**ಡಾ.ಬಿ.ಜೆ.ಗಿರೀಶ**ಎಂ.ಎಸ್ಸಿ, ಎಂಫಿಲ್.,ಪಿಎಚ್.ಡಿ
**ಸಂಚಾಲಕರು, ಪಠ್ಯೇತರಚಟುವಟಿಕೆ ವಿಭಾಗ**
ಮೋ::09741148002

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಗಣಿತಶಾಸ್ತ್ರ ವಿಭಾಗ
ಇ.ಮೇಲ್: :bjgireesu@gmail.com


## ಸುತ್ತೋಲೆ

ದಿನಾಂಕ: 29-01-2019

**ಗೆ,**
**ಅಧ್ಯಕ್ಷರು/ಮುಖ್ಯಸ್ಥರು,**
ಸ್ನಾತಕೋತ್ತರ ವಿಭಾಗಗಳು,
ಕುವೆಂಪು ವಿಶ್ವವಿದ್ಯಾಲಯ.

**ಮಾನ್ಯರೇ,**

**ವಿಷಯ: 2018-19ನೇ ಸಾಲಿನ ಅಂತರ್ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ "ಸಹಕಾರ ವಿಷಯ" ಕುರಿತ ಚರ್ಚಾಸ್ಪರ್ಧೆಯನ್ನು ನಡೆಸುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,**'ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು'** ಸಹಕಾರ ಚಳುವಳಿಯ ಅಭಿವೃದ್ಧಿಗೆ ಪೂರಕವಾದ ಸಹಕಾರ ಶಿಕ್ಷಣ ತರಬೇತಿ ಮತ್ತು ಪ್ರಚಾರ ಹೊಣೆ ಹೊತ್ತ ರಾಜ್ಯ ಮಟ್ಟದ ಮಾತ್ರ ಸಂಸ್ಥೆಯಾಗಿದ್ದು, ಇದು ಸಹಕಾರ ಚಳುವಳಿಯ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಕಾರ್ಯಗತಗೊಳಿಸುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಭವಿಷ್ಯದ ಯುವಜನರುಸಕ್ರೀಯವಾಗಿ ಭಾಗವಹಿಸಿ ಸಹಕಾರ ಚಳುವಳಿಯನ್ನು ಯಶಸ್ವಿಗೊಳಿಸಲು ಸಾಧ್ಯವಾಗುವಂತೆ, ಮುಂದಾಳತ್ವ, ನಾಯಕತ್ವವಹಿಸುವುದಕ್ಕೆಪ್ರೇರೇಪಿಸುವ ಉದ್ದೇಶದಿಂದ ಸ್ನಾತಕೋತ್ತರವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಚರ್ಚಾಸ್ಪರ್ಧೆಯನ್ನು ನಡೆಸುವ ಉದ್ದೇಶದಿಂದ ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ನಾತಕೋತ್ತರವಿದ್ಯಾರ್ಥಿಗಳಿಗೆ ಸಹಕಾರವಿಷಯ ಕುರಿತು ಚರ್ಚಾ ಸ್ಪರ್ಧೆಯನ್ನು ನಡೆಸಲು ಇಚ್ಚಿಸಿದ್ದು ಈ ಕಾರ್ಯಕ್ರಮವನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರ ನೇತೃತ್ವದಲ್ಲಿ **ದಿನಾಂಕ:05-02-2019ರಂದು ಮಧ್ಯಾಹ್ನ 02:30ಕ್ಕೆ** ಗಣಿತಶಾಸ್ತ್ರ ವಿಭಾಗದ ಬೋಧನಾ ಕೊಠಡಿ ಸಂಖ್ಯೆ: 05 ರಲ್ಲಿ ನಡೆಸಲು ಉದ್ದೇಶಿಸಲಾಗಿದೆ.ತಾವುಗಳು ತಮ್ಮವಿಭಾಗದಿಂದ ಇಬ್ಬರು ವಿದ್ಯಾರ್ಥಿಗಳನ್ನು (ಪರ ಮತ್ತು ವಿರೋಧ) ಈ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಕಳುಹಿಸಿಕೊಡಬೇಕಾಗಿ ತಮ್ಮಲ್ಲಿ ಕೋರುತ್ತೇನೆ. ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ವಿವರಗಳನ್ನು ಸಂಚಾಲಕರು, ಪಠ್ಯೇತರ ಚಟುವಟಿಕೆ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಇವರಿಗೆ **ಇ-ಮೇಲ್ ಅಥವಾ ಮೊಬೈಲ್** ಮೂಲಕ ತಿಳಿಸಬೇಕಾಗಿ ಕೋರಲಾಗಿದೆ.

ಸ್ಪರ್ಧೆಯಲ್ಲಿ ಜಯಶೀಲರಾಗುವ ಮೊದಲ ಇಬ್ಬರು ಸ್ನಾತಕೋತ್ತರವಿದ್ಯಾರ್ಥಿಗಳನ್ನು(ಒಬ್ಬರು ವಿಷಯದ ಪರವಾಗಿ ಮತ್ತೊಬ್ಬರು ವಿಷಯದ ವಿರುದ್ಧವಾಗಿ) ದಿನಾಂಕ: 13-02-2019ರಂದು ಸಹಕಾರ ಮಹಾಮಂಡಳವು ಹಂಪಿ ವಿಶ್ವವಿದ್ಯಾಲಯ, ವಿದ್ಯಾರಣ್ಯಾ, ಇಲ್ಲಿನ ಮಂಟಪ ಸಭಾಂಗಣ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಏರ್ಪಡಿಸಿರುವ ರಾಜ್ಯ ಮಟ್ಟದ ಅಂತರ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಕಳುಹಿಸಿಕೊಡಲಾಗುವುದು. ರಾಜ್ಯ ಮಟ್ಟದ ಚರ್ಚಾಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ ₹5,000/-, ದ್ವಿತೀಯ ಬಹುಮಾನ ₹4,000/-, ತೃತೀಯ ಬಹುಮಾನ ₹3,000/- ಹಾಗೂ ವಿಜೇತರಾದ ವಿಶ್ವವಿದ್ಯಾಲಯಕ್ಕೆ ಒಂದು ಬೆಳ್ಳಿ ಪರ್ಯಾಯ ಪಾರಿತೋಷಕವನ್ನು ನೀಡಲಾಗುವುದು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

(ಬಿ.ಜೆ.ಗಿರೀಶ)

# ಕುವೆಂಪು ವಿಶ್ವವಿದ್ಯಾಲಯ

**ಪಠ್ಯೇತರ ಚಟುವಟಿಕೆ ವಿಭಾಗ**

**ಜ್ಞಾನಸಹ್ಯಾದ್ರಿ ಶಂಕರಘಟ್ಟ – 577451**

**ಡಾ.ಬಿ.ಜೆ.ಗಿರೀಶ**ಎಂ.ಎಸ್ಸಿ, ಎಂಫಿಲ್.,ಪಿಎಚ್.ಡಿ
**ಸಂಚಾಲಕರು, ಪಠ್ಯೇತರಚಟುವಟಿಕೆ ವಿಭಾಗ**
ಮೋ::09741148002

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಗಣಿತಶಾಸ್ತ್ರ ವಿಭಾಗ
ಇ.ಮೇಲ್: :bjgireesu@gmail.com

## ಸುತ್ತೋಲೆ

ದಿನಾಂಕ: 29-01-2019

**ಗೆ,**

ಪ್ರಾಂಶುಪಾಲರು
ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಪದವಿ/ಪ್ರಥಮದರ್ಜೆ ಕಾಲೇಜುಗಳು

**ಮಾನ್ಯರೇ,**

**ವಿಷಯ: 2018-19ನೇ ಸಾಲಿನ ಅಂತರ್ ವಿಶ್ವವಿದ್ಯಾಲಯದ ಪದವಿ ವಿದ್ಯಾರ್ಥಿಗಳಿಗೆ "ಸಹಕಾರ ವಿಷಯ" ಕುರಿತ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,'**ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು**' ಸಹಕಾರ ಚಳುವಳಿಯ ಅಭಿವೃದ್ಧಿಗೆ ಪೂರಕವಾದ ಸಹಕಾರ ಶಿಕ್ಷಣ ತರಬೇತಿ ಮತ್ತು ಪ್ರಚಾರ ಹೊಣೆ ಹೊತ್ತ ರಾಜ್ಯ ಮಟ್ಟದ ಮಾತ್ರ ಸಂಸ್ಥೆಯಾಗಿದ್ದು, ಇದು ಸಹಕಾರ ಚಳುವಳಿಯ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಕಾರ್ಯಗತಗೊಳಿಸುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಭವಿಷ್ಯದ ಯುವಜನರು ಸಕ್ರೀಯವಾಗಿ ಭಾಗವಹಿಸಿ ಸಹಕಾರ ಚಳುವಳಿಯನ್ನು ಯಶಸ್ವಿಗೊಳಿಸಲು ಸಾಧ್ಯವಾಗುವಂತೆ, ಮುಂದಾಳತ್ವ, ನಾಯಕತ್ವ ವಹಿಸುವುದಕ್ಕೆ ಪ್ರೇರೇಪಿಸುವ ಉದ್ದೇಶದಿಂದ ಪದವಿ ವಿದ್ಯಾರ್ಥಿಗಳಿಗೆ ಸಹಕಾರ ಕುರಿತ ಚರ್ಚಾ ಸ್ಪರ್ಧೆಯನ್ನು ನಡೆಸುವ ಉದ್ದೇಶದಿಂದ ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಸಹಕಾರವಿಷಯ ಕುರಿತು ಚರ್ಚಾ ಸ್ಪರ್ಧೆಯನ್ನು ನಡೆಸಲು ಇಚ್ಚೆಸಿದ್ದು, ಈ ಕಾರ್ಯಕ್ರಮವನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶಕರ ನೇತೃತ್ವದಲ್ಲಿ **ದಿನಾಂಕ:05-02-2019ರಂದು ಬೆಳಗ್ಗೆ 10.30 ಗಂಟೆಗೆ, ವಿಶ್ವವಿದ್ಯಾಲಯದ** ಗಣಿತಶಾಸ್ತ್ರ ವಿಭಾಗದ ಬೋಧನಾ ಕೊಠಡಿ ಸಂಖ್ಯೆ: 05 ರಲ್ಲಿ ನಡೆಸಲು ಉದ್ದೇಶಿಸಲಾಗಿದೆ. ತಾವುಗಳು ತಮ್ಮ ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳನ್ನು (ಪರ ಮತ್ತು ವಿರೋಧ) ಈ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಕಳುಹಿಸಿಕೊಡಬೇಕಾಗಿ ತಮ್ಮಲ್ಲಿ ಕೋರುತ್ತೇನೆ. ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ವಿವರಗಳನ್ನು ಸಂಚಾಲಕರು, ಪಠ್ಯೇತರ ಚಟುವಟಿಕೆ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಇವರಿಗೆ **ಇ–ಮೇಲ್ ಅಥವಾ ಮೊಬೈಲ್** ಮೂಲಕ ತಿಳಿಸಬೇಕಾಗಿ ಕೋರಲಾಗಿದೆ.

ಸ್ಪರ್ಧೆಯಲ್ಲಿ ಜಯಶೀಲರಾಗುವ ಮೊದಲ ಇಬ್ಬರು ಪದವಿ ವಿದ್ಯಾರ್ಥಿಗಳನ್ನು(ಒಬ್ಬರು ವಿಷಯದ ಪರವಾಗಿ ಮತ್ತೊಬ್ಬರು ವಿಷಯದ ವಿರುದ್ಧವಾಗಿ) ದಿನಾಂಕ: 13–02–2019ರಂದು ಸಹಕಾರ ಮಹಾಮಂಡಳವು ಹಂಪಿ ವಿಶ್ವವಿದ್ಯಾಲಯ, ವಿದ್ಯಾರಣ್ಯಾ, ಇಲ್ಲಿನ ಮಂಟಪ ಸಭಾಂಗಣ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಏರ್ಪಡಿಸಿರುವ ರಾಜ್ಯ ಮಟ್ಟದ ಅಂತರ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ಕಳುಹಿಸಿಕೊಡಲಾಗುವುದು. ರಾಜ್ಯ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ ₹4,000/-, ದ್ವಿತೀಯ ಬಹುಮಾನ ₹3,000/-, ತೃತೀಯ ಬಹುಮಾನ ₹2000/-ಹಾಗೂ ವಿಜೇತರಾದ ವಿಶ್ವವಿದ್ಯಾಲಯಕ್ಕೆ ಒಂದು ಬೆಳ್ಳಿ ಪರ್ಯಾಯ ಪಾರಿತೋಷಕವನ್ನು ನೀಡಲಾಗುವುದು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

(ಬಿ.ಜೆ.ಗಿರೀಶ)

**ಕುವೆಂಪು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ**
**ಇವರ ಸಹಭಾಗಿತ್ವದಲ್ಲಿ ನಡೆಯುವ**

# ಚರ್ಚಾ ಸ್ಪರ್ಧೆಗೆ ಮಾದರಿ ವಿಷಯಗಳು

1. ಸಹಕಾರ ಚಳುವಳಿಯ ಯಶಸ್ಸಿಗೆ ಉತ್ತಮ ನಾಯಕತ್ವ ಅವಶ್ಯಕತೆ.
2. ಸ್ವಸಹಾಯ, ಪರಸ್ಪರ ಸಹಾಯ ಮತ್ತು ಉಳಿತಾಯ ಸಹಕಾರ ಸಂಸ್ಥೆಗಳಿಗೆ ಬೆನ್ನೆಲುಬು.
3. ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಸಂಸ್ಥೆಗಳು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು.
4. ಸಹಕಾರ ಚಳುವಳಿಯ ಸ್ಥಿರತೆಗೆ ಸರ್ಕಾರದ ಮಧ್ಯ ಪ್ರವೇಶ ಅವಶ್ಯಕವಾಗಿದೆ.
5. ರಾಷ್ಟ್ರದ ಆರ್ಥಿಕ ಬೆಳವಣಿಗೆ ಸಹಕಾರಿ ವ್ಯವಸ್ಥೆಯಿಂದ ಮಾತ್ರ ಸಾಧ್ಯ.
6. ಬಡತನ, ನಿರುದ್ಯೋಗ ನಿವಾರಣೆಗೆ ಸಹಕಾರಿ ವ್ಯವಸ್ಥೆಯೇ ಪ್ರಬಲ ಸಾಧನ.
7. ಸಹಕಾರ ಚಳುವಳಿಯಿಂದ ಮಾತ್ರವೇ ಗ್ರಾಮೀಣ ಅಭಿವೃದ್ಧಿ ಸಾಧ್ಯ.
8. ಮಹಿಳಾ ಸಬಲೀಕರಣಕ್ಕೆ ಸಹಕಾರ ಚಳುವಳಿ ಪೋಷಕ ಹಾಗೂ ಪೂರಕ.
9. ಭವಿಷ್ಯದ ಅಭಿವೃದ್ಧಿಗೆ ಸಹಕಾರ ತತ್ವಗಳೇ ಪ್ರಸ್ತುತ.
10. ಸಹಕಾರಾಭಿವೃದ್ಧಿಗೆ ಬರುವ ಮುಂದಾಳತ್ವ ಅಗತ್ಯ.
11. ಸ್ವತಂತ್ರ ಸ್ವಾಯತ್ತ ಸಹಕಾರ ಚಳುವಳಿಯೊಂದೇ ರಾಷ್ಟ್ರವನ್ನು ಪ್ರಗತಿಯತ್ತ ಮುನ್ನೆಡಸಬಲ್ಲದು.
12. ಬದಲಾದ ಆರ್ಥಿಕ ವ್ಯವಸ್ಥೆಯಲ್ಲಿ ಜನ ಸಾಮಾನ್ಯರ ಆರ್ಥಿಕಾಭಿವೃದ್ಧಿಯನ್ನು ಸಹಕಾರಿ ಸಂಘಗಳಿಂದ ಸಾಧಿಸಲು ಸಾಧ್ಯವೇ ಅಥವಾ ಇಲ್ಲವೇ?
13. ಮಾಹಿತಿ ತಂತ್ರಜ್ಞಾನದಿಂದ ಸಹಕಾರಿ ಚಳುವಳಿ ಅಭಿವೃದ್ಧಿ ಸಾಧ್ಯವೇ ಅಥವಾ ಇಲ್ಲವೇ?
14. ಕ್ಷೀರ ಕ್ರಾಂತಿಯಲ್ಲಿ ಕರ್ನಾಟಕ ರಾಜ್ಯ ಎಷ್ಟರ ಮಟ್ಟಿಗೆ ಸಾಧನೆ ಗೈದಿದೆ.
15. ಹಸಿರು ಕ್ರಾಂತಿಯನ್ನು ಸಫಲತೆಗೊಳಿಸುವಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಪಾತ್ರವೇನು?
16. ಇಂದಿನ ಆರ್ಥಿಕ ಹಿಂಜರಿತವನ್ನು ಹಿಮ್ಮೆಟ್ಟಲು ಸಹಕಾರ ಕ್ಷೇತ್ರದಿಂದ ಮಾತ್ರ ಸಾಧ್ಯ.
17. ಭಾರತದ ಬಡತನ ನಿವಾರಣೆಗೆ ಸಹಕಾರ ಸಂಸ್ಥೆಗಳೇ ಸರಿಯಾದ ಸಾಧನಗಳು.
18. ಖಾಸಗಿ ಕ್ಷೇತ್ರದ ಶೋಷಣೆಗೆ ಪರಿಹಾರವೆಂದರೆ ಸಹಕಾರವೇ ಮದ್ದು.
19. ಗ್ರಾಮೀಣ ಸುಸ್ಥಿರ ಅಭಿವೃದ್ಧಿಗೆ ಸಹಕಾರವೇ ಸರಿಯಾದ ಮಾರ್ಗ.

20. ಸ್ತ್ರೀ ಸಬಲೀಕರಣ ಕೇವಲ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಿಂದ ಮಾತ್ರ ಸಾಧ್ಯ.
21. ಬಂಡವಾಳಶಾಹಿ, ಸಮಾಜವಾದಿಗಳು ಹಿಂದಿನ ಅಭಿವೃದ್ಧಿಯ ಮಂತ್ರಗಳಾಗಿದ್ದರೆ, ಸಹಕಾರ ಚಳುವಳಿ ಇಂದು ಮತ್ತು ನಾಳೆಯ ಅಭಿವೃದ್ಧಿ ಮಂತ್ರ.
22. ಸಹಕಾರಿ ರಂಗದ ಬೆಳವಣಿಗೆಯಲ್ಲಿ ಯುವಕರ ಮತ್ತು ಮಹಿಳೆಯರ ಪಾತ್ರ.
23. ಸಹಕಾರಿ ರಂಗದ ಅವನತಿಗೆ ಅಸಮರ್ಥ ನಾಯಕತ್ವವೇ ಕಾರಣ.
24. ಸಹಕಾರ ತತ್ವ ಇಂದಿನ ದಿನಗಳಲ್ಲಿ ಯಾವುದೇ ರೀತಿಯಲ್ಲೂ ಪ್ರಸ್ತುತವಲ್ಲ.
25. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ತತ್ವಗಳ ಅನುಷ್ಠಾನದಿಂದ ವಿಶ್ವ ಶಾಂತಿಯನ್ನು ಸಾಧಿಸಬಹುದು.
26. ಭಾರತದ ಕೃಷಿ ವ್ಯವಸ್ಥೆಯ ಪುನರುತ್ಥಾನ ಸಹಕಾರಿ ತತ್ವಗಳಿಂದ ಮಾತ್ರ ಸಾಧ್ಯ.
27. ಜಾಗತೀಕರಣದಿಂದಾಗಿ ಸಹಕಾರ ಚಳುವಳಿ ಹಿಂದಿಗಿಂತ ಹೆಚ್ಚು ಪ್ರಸ್ತುತ.
28. ವೃತ್ತಿ ಪರತೆಯ ಕೊರತೆಯು ಸಹಕಾರ ಸಂಘಗಳ ಪ್ರಮುಖ ಸಮಸ್ಯೆ.
29. ಪ್ರಸ್ತುತ ಪರಿಸ್ಥಿತಿಯಲ್ಲಿ ಸಹಕಾರ ಚಳುವಳಿ ಹೆಚ್ಚು ಪ್ರಸ್ತುತ.
30. ರಾಷ್ಟ್ರದ ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಸಹಕಾರವೊಂದೇ ಪರಿಹಾರ.
31. ಮಾಹಿತಿ ತಂತ್ರಜ್ಞಾನ ಬಳಕೆ ಮತ್ತು ಸಹಕಾರಾಭಿವೃದ್ಧಿ.
32. ದಕ್ಷ ನಾಯಕತ್ವವೊಂದೇ ಸಹಕಾರ ಚಳುವಳಿಯನ್ನು ಉಳಿಸಬಲ್ಲದು, ಬೆಳೆಸಬಲ್ಲದು.
33. ಮಹಿಳಾ ಸಬಲೀಕರಣ ಸಹಕಾರಿ ವ್ಯವಸ್ಥೆಯಿಂದ ಮಾತ್ರ ಸಾಧ್ಯ.
34. ರಾಜಕೀಯ ಮಧ್ಯ ಪ್ರವೇಶವೇ ಸಹಕಾರ ಚಳುವಳಿಯ ವೈಫಲ್ಯಕ್ಕೆ ಕಾರಣ.
35. ಸಹಕಾರ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ವಿಶ್ವವಿದ್ಯಾಲಯ ಪೋಷಕವಾಗಬಲ್ಲದು.
36. ಮಹಿಳೆಯರು ಮತ್ತು ಯುವಜನರಿಂದ ಮಾತ್ರವೇ ಸಹಕಾರ ಕ್ಷೇತ್ರದ ನಿರೀಕ್ಷಿತ ಸಾಧನೆ ಸಾಧ್ಯ.
37. ಸಹಕಾರ ತತ್ವ ಮತ್ತು ಆಚರಣೆಯಲ್ಲಿ ಜನರ ವಿಶ್ವಾಸ ಕುಸಿಯುತ್ತಿದೆ.
38. ರಾಷ್ಟ್ರದ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಸಹಕಾರ ತತ್ವವೊಂದೇ ಪ್ರಮುಖ ಸಾಧನ.
39. ಸಹಕಾರ ಕ್ಷೇತ್ರದಲ್ಲಿ ಕಾರ್ಪೋರೇಟ್ ಆಡಳಿತ ವ್ಯವಸ್ಥೆ ಮತ್ತು ವೃತ್ತಿಪರ ಆಡಳಿತ ವ್ಯವಸ್ಥೆ ಜಾರಿಯಿಂದ ಮಾತ್ರ ಚಳುವಳಿಯನ್ನು ಬೆಳೆಸಲು ಸಾಧ್ಯ.
40. ಶೋಷಣೆರಹಿತ ಸಮಾಜ, ಗ್ರಾಮೀಣಾಭಿವೃದ್ಧಿ, ಬಡತನ ನಿವಾರಣೆ, ಉದ್ಯೋಗ ಸೃಷ್ಟಿ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಸಹಕಾರ ತತ್ವವನ್ನು ಸಾಂವಿಧಾನಿಕವಾಗಿ ಮತ್ತು ಕಡ್ಡಾಯವಾಗಿ ಜಾರಿಗೊಳಿಸುವುದೊಂದೇ ಮಾರ್ಗ.

41. ವಿಶ್ವದ ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು ಸಹಕಾರ ತತ್ವ ಮತ್ತು ಆಚರಣೆಯೊಂದೇ ಪರಿಹರಿಸಲು ಸಮರ್ಥ.

42. ಭಾರತದಲ್ಲಿ ಸಹಕಾರ ಚಳುವಳಿ ಸಂಪೂರ್ಣವಾಗಿ ವಿಫಲವಾಗಿದೆ.

43. 107 ವರ್ಷದ ಸಹಕಾರ ಚಳುವಳಿಗೆ ಭಾರತದಲ್ಲಿ ಭವಿಷ್ಯವಿಲ್ಲ.

44. ಸಹಕಾರ ತತ್ವದಿಂದ, ಜನಸಮುದಾಯದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಗತ್ಯಗಳನ್ನು ಪೂರೈಕೆ ಮಾಡಿಕೊಳ್ಳಲು ಸಾಧ್ಯ.

45. ವಿಶ್ವಭ್ರಾತೃತ್ವವನ್ನು ಮೂಡಿಸುವ ಮೂಲಕ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಹೆಚ್ಚಿಸಬಲ್ಲದು.

46. ಆರ್ಥಿಕ ಮತ್ತು ಶೈಕ್ಷಣಿಕ ಸುಭದ್ರತೆಗೆ ಸಹಕಾರ ತತ್ವವೇ ಮೂಲ ಮಂತ್ರ.

47. ಪ್ರಸ್ತುತದ ವಿಶ್ವದ ಆರ್ಥಿಕ ಬಿಕ್ಕಟ್ಟಿಗೆ ಪರಿಹಾರವೆಂದರೆ ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವುದೇ ಆಗಿದೆ.

48. ಪಂಚವಾರ್ಷಿಕ ಯೋಜನೆಯ ಒಳಗೊಳ್ಳುವಿಕೆ ಯೋಜನೆಗಳು ವಿಫಲವಾಗಿವೆ ಅವುಗಳನ್ನು ಸಹಕಾರಿ ವ್ಯವಸ್ಥೆಯಿಂದ ಬದಲಾಯಿಸಿದರೆ ಮಾತ್ರ ಕೆಳವರ್ಗಗಳ ಅಭಿವೃದ್ಧಿ ಸಾಧ್ಯ.

49. 2012ನೇ ವರ್ಷವನ್ನು ಅಂತರಾಷ್ಟ್ರೀಯ ಸಹಕಾರ ವರ್ಷವೆಂದು ಘೋಷಿಸಿರುವುದು ಸಹಕಾರ ಚಳವಳಿಗೆ ಪೂರಕವಾಗಿದೆಯೇ?

50. ಸಹಕಾರ ಚಳುವಳಿಯನ್ನು ಯಶಸ್ವಿಗೊಳಿಸುವಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯ?

51. ಆರ್ಥಿಕವಾಗಿ ಹಿಂದುಳಿದ ವರ್ಗದವರ ಹಿತ ಕಾಪಾಡುವ ಸಹಕಾರ ವಲಯ ಒಂದು ಪರ್ಯಾಯ ಸಂಸ್ಥೆಯಾಗಿದೆ.

52. ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಉತ್ತಮ ಆಡಳಿತವೊಂದೇ ಪರ್ಯಾಯ ಮಾರ್ಗ.

53. ಜಾಗತೀಕರಣದ ಕೆಟ್ಟ ಪರಿಣಾಮಗಳನ್ನು ಸಹಕಾರ ಸಂಸ್ಥೆಗಳು ತೊಡೆದುಹಾಕಬಲ್ಲವು?

54. ಭಾರತದಲ್ಲಿ ಸರ್ಕಾರಗಳು ಸಹಕಾರ ಚಳುವಳಿಯನ್ನು ನಾಶಗೊಳಿಸಿವೆ.

55. ಸಹಕಾರಿ ಕಾಮನ್‌ವೆಲ್ತ್ ಎನ್ನುವುದು ಕೇವಲ ಕನಸು.

56. ಸಣ್ಣ ರೈತರ ಬೆಳವಣಿಗೆಗೆ ಸಹಕಾರ ಸಂಸ್ಥೆಗಳಿಂದ ಮಾತ್ರ ಸಾಧ್ಯ.

57. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ಮಹಾಮಂಡಳವು ಸಫಲವಾಗಿದೆ.

58. ರೈತರ ಆತ್ಮಹತ್ಯೆ ತಪ್ಪಿಸಲು ಸಹಕಾರ ಸಂಘಗಳು ನೆರವಾಗಬಲ್ಲದು.

59. ಅಂತಾರಾಷ್ಟ್ರೀಯ ಸಹಕಾರ ದಶಕದ ಆಚರಣೆಯಿಂದ ಸಹಕಾರ ಚಳುವಳಿ ಪ್ರಬಲಗೊಳ್ಳಬಹುದು.

60. ಪ್ರಜಾಪ್ರಭುತ್ವದ ನೆಲಗಟ್ಟು ಭದ್ರಗೊಳ್ಳಲು ಸಹಕಾರ ಚಳುವಳಿ ಕಾರಣೀಭೂತವಾಗಿದೆ.

61. ಸಂಪೂರ್ಣ ಸ್ವಾತಂತ್ರ್ಯ, ಸ್ವಾಯತ್ತತೆ ಇಲ್ಲದೆ ಸಹಕಾರ ಚಳುವಳಿ ನಶಿಸಿಹೋಗುತ್ತದೆ.

62. ಯುವಜನರು, ಮಹಿಳೆಯರು, ಹಿಂದುಳಿದ ವರ್ಗದವರು ಸಹಕಾರ ಕ್ಷೇತ್ರಕ್ಕೆ ಸಹಕಾರ ತತ್ವದ ಪುನರ್‌ವಿಮರ್ಶೆ ಅಗತ್ಯ.

63. ಸಹಕಾರ ಚಳುವಳಿಯ ಧ್ಯೇಯ ಉದ್ದೇಶಗಳ ಪುನರ್‌ಪರಿಶೀಲನೆಯಿಂದ ಮಾತ್ರವೇ ಚಳುವಳಿಯ ಬೆಳವಣಿಗೆ ಸಾಧ್ಯ.

64. ನಾಯಕತ್ವ ವೈಫಲ್ಯ ಸರ್ಕಾರದ ಮಧ್ಯೆ ಪ್ರವೇಶದಿಂದ ಸಹಕಾರ ಚಳುವಳಿ ವಿಫಲವಾಗದೆ.

65. ಸಹಕಾರ ವ್ಯವಸ್ಥೆಯ ಸಂಪೂರ್ಣ ಪುನರ್‌ರಚನೆಯಿಂದ ಮಾತ್ರವೇ ಚಳುವಳಿಯನ್ನು ಬೆಳೆಸಲು ಸಾಧ್ಯ.

66. ಸರ್ಕಾರದ ನೆರವು, ಹತೋಟಿ ಇಲ್ಲದೆ ಸಹಕಾರ ಚಳುವಳಿ ಯಶಸ್ವಿಯಾಗದು.

67. ಸಕ್ರಿಯ ರಾಜಕಾರಣಗಳಿಗೆ ಸಹಕಾರ ಕ್ಷೇತ್ರದಲ್ಲಿ ಅವಕಾಶವಿರಬಾರದು.

68. ಭಾರತ ಅರ್ಥ ವ್ಯವಸ್ಥೆ ಸಹಕಾರ ಅಭಿವೃದ್ಧಿಗೆ ಪೂರಕವಾಗಿಲ್ಲ.

69. ಶಾಲಾ–ಕಾಲೇಜುಗಳಲ್ಲಿ ಸಹಕಾರ ಪಠ್ಯ ವಿಷಯವನ್ನಾಗಿ ಮಾಡುವುದರಿಂದ ಮಾತ್ರವೇ ವಿದ್ಯಾರ್ಥಿಗಳಲ್ಲಿ ಸಹಕಾರ ಪ್ರಜ್ಞೆ ಮೂಡಿಬರಲು ಸಾಧ್ಯ.

70. ಸಹಕಾರ ವ್ಯವಸ್ಥೆಯಲ್ಲಿ ತಪ್ಪಿಗೆ ತಕ್ಕ ಶಿಕ್ಷೆ ಆಗದಿರುವುದೇ ಚಳುವಳಿಯ ಅವನತಿಗೆ ಕಾರಣವೆನಿಸಿದೆ.

71. ಇಂದಿನ ಪರಿಸ್ಥಿತಿಯಲ್ಲಿ ಸಹಕಾರ ಚಳುವಳಿ ಪ್ರಸ್ತುತವೇ.

72. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಸಹಕಾರ ಸಂಘ–ಸಂಸ್ಥೆಗಳ ಚುನಾವಣೆಯಲ್ಲಿ ಅಭದ್ರಗೊಳಿಸಬಹುದೇ.

73. ಕಬ್ಬು ಪೂರೈಸಿದ ರೈತರಿಗೆ ಸಮರ್ಪಕವಾದ ಬೆಲೆಯಿಲ್ಲದೆ ರೈತರನ್ನು ಶೋಷಿಸುತ್ತಿವೆ.

74. ರಾಷ್ಟ್ರದ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಸಹಕಾರ ತತ್ವವೊಂದೇ ಪರಿಹಾರ.

75. ಆರ್ಥಿಕ ಮತ್ತು ಸಾಮಾಜಿಕ ಸುಭದ್ರತೆಗೆ ಸಹಕಾರ ತತ್ವವೇ ಮೂಲ ಮಂತ್ರ.

76. ಸಹಕಾರ ಕ್ಷೇತ್ರದಲ್ಲಿ ಸಮರ್ಥ ಕಾರ್ಪೋರೇಟ್ ಆಡಳಿತ ವ್ಯವಸ್ಥೆಯಿಂದ ಮಾತ್ರ ಚಳುವಳಿ ಬೆಳೆಸಲು ಸಾಧ್ಯ.

* * * * * * *